

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೭

**ಈ** ಬಾರಿ ಬೇಲೂರು ಮಠದಲ್ಲಿ ಮಹಾರಾಜರ ಆರೋಗ್ಯ ಉತ್ತಮಗೊಂಡಿತು. ದೀಕ್ಷಾದಿಗಳು ನಡೆಯುತ್ತಿದ್ದವು. ಶ್ರೀರಾಮ ಕೃಷ್ಣ-ವಿವೇಕಾನಂದರ ಆದರ್ಶವನ್ನು ತಮ್ಮ ಜೀವನದಲ್ಲಿ ಅಳ ವಡಿಸಿಕೊಳ್ಳಬೇಕೆಂಬ ಧ್ಯೇಯವನ್ನಿಟ್ಟುಕೊಂಡ ಶ್ರದ್ಧಾಳುಗಳು ಸಾಧನೆಯ ಬಗ್ಗೆ ಮಾರ್ಗದರ್ಶನ ಪಡೆಯಲು ಭಾರತದ ನಾನಾ ಸ್ಥಳಗಳಿಂದ ಬೇಲೂರು ಮಠಕ್ಕೆ ಬರುತ್ತಿದ್ದರು. ಜಗದ್ಗುರುವಾದ ಶ್ರೀರಾಮಕೃಷ್ಣರೇ ಗುರು; ಮಠಾಧ್ಯಕ್ಷರು ಅವರ ಯಂತ್ರವಷ್ಟೇ ಎಂಬುದು ಶ್ರೀರಾಮಕೃಷ್ಣರ ಪಾರ್ಷದರ ಮನೋಭಾವ. ಈ ಮಾತನ್ನೇ ವಿರಜಾನಂದರು ತಮ್ಮಿಂದ ದೀಕ್ಷೆ ಪಡೆದವರಿಗೆಲ್ಲ ಒತ್ತಿ ಹೇಳುತ್ತಿದ್ದರು. ಮಾನವ ದೇಹಧಾರಿಯಾದ ಗುರುವಿನಲ್ಲಿ ನಾವು ಕಂಡುಕೊಂಡ ಅಭಯ, ಕರುಣೆ ಮತ್ತು ಶಾಂತಿಯು ಆ ಸಚ್ಚಿ ದಾನಂದ ಗುರುವಿನ ಶಕ್ತಿಯೇ. ಆ ಶಕ್ತಿಗೆ ನಾಶವೆಂಬುದಿಲ್ಲ, ಅಂತ್ಯವೆಂಬುದಿಲ್ಲ.

ಮಹಾರಾಜರಿಂದ ದೀಕ್ಷೆ ಪಡೆದವನೊಬ್ಬನ ಸ್ಮರಣೆ :

''ಮಹಾರಾಜರು ಬೇಲೂರು ಮಠದಲ್ಲಿದ್ದಾಗ ಅವರ ದರ್ಶನ ಪಡೆಯಲು ಆಗಾಗ ಹೋಗುತ್ತಿದ್ದೆ. ಕೆಲವೊಮ್ಮೆ ಮಹಾರಾಜರ ಸೇವಕರನ್ನು ಕೇಳಿಕೊಂಡು ಅವರೊಡನೆ ಏಕಾಂತವಾಗಿ ಮಾತ ನಾಡುತ್ತಿದ್ದೆ. ಮಾತನಾಡಲು ಅವಕಾಶ ಸಿಗದ ದಿನಗಳಲ್ಲಿ ಪ್ರಣಾಮ ಮಾಡಿ ಕೆಲವು ಕ್ಷಣಗಳು ಅವರ ಪದತಲದಲ್ಲಿ ಕುಳಿತು, ಅವ ರೆಡೆಗೆ ವ್ಯಾಕುಲ ದೃಷ್ಟಿಯಿಂದ ನೋಡಿ ಬರುತ್ತಿದ್ದೆ. ಅವರೂ ಸಹ ಕರುಣಾಪೂರಿತ ದೃಷ್ಟಿಯಿಂದ ನನ್ನನ್ನು ನಿಟ್ಟಿಸಿ ನೋಡುತ್ತಿದ್ದರು. ಮಾತಿರುತ್ತಿರಲಿಲ್ಲ. ಆದರೆ ಅವರ ನಯನಗಳು ಅಭಯವನ್ನು ಸೂಸುತ್ತಿದ್ದವು. ಒಂದು ದಿನ ನಾನು, ''ನಿಮ್ಮ ಕೃಪೆಯಿಂದ ನನಗೆ ಅಂತರ್ಯದಲ್ಲಿ ಅನೇಕ ಅನುಭೂತಿಗಳೇನೋ ಆಗುತ್ತಲಿವೆ, ಆದರೆ ಎಂದು ಎಲ್ಲವೂ ಸಂಪೂರ್ಣವಾಗಿ ಮುಗಿಯುತ್ತವ ಯೇನೋ ಅನಿಸುತ್ತಿದೆ'' ಎಂದು ನಿವೇದಿಸಿಕೊಂಡೆ. ಅದಕ್ಕೆ ಅವರು, ''ಯಾವಾಗ ಎಲ್ಲವೂ ಮುಗಿಯುತ್ತದೆಂದು ನಾನೀಗ ಲೆಕ್ಕ ಮಾಡುತ್ತ ಕುಳಿತುಕೊಳ್ಳಲೇನು?'' ಎಂದರು. ನಾನು (ಸದರ್ಕದಿಂದ) ''ನೀವು ಹೇಳಬಲ್ಲಿರಿ'' ಎಂದೆ.

ಮಹಾರಾಜ್: ಇಲ್ಲ, ಅದನ್ನೆಲ್ಲ ಯೋಚಿಸುತ್ತ ಕುಳಿತು ಕೊಳ್ಳುವುದು ಸರಿಯಲ್ಲ.

ನಾನು: ನನಗಂತೂ ಏನೂ ಮಾಡಲಾಗಲಿಲ್ಲ. ಸದ್ಯದಲ್ಲಿ ಆಗುತ್ತಿರುವುದೆಲ್ಲ ನಿಮ್ಮ ಆಶೀರ್ವಾದದಿಂದಲೇ.

ಮಹಾರಾಜ್: (ಗಂಭೀರ ಸ್ವರದಿಂದ) ಎಲ್ಲವೂ ಅವನ ಕೃಪೆ, ಅವನ ಕೃಪೆ!

ನಾನು: ನನಗೆ ಬೇರೇನೂ ಇಷ್ಟವಾಗುತ್ತಿಲ್ಲ.

ಮಹಾರಾಜ್: ಭಯಬೇಡ. ನಮ್ಮಲ್ಲಿ ಅನುರಾಗ ಉದಯ ವಾಗಿದೆಯೆಂದರೆ ಅವಶ್ಯವಿರುವುದನ್ನು ಅವನೇ ಕರುಣಿಸು ತ್ತಾನೆ. ನೀನು ಚಿಂತಿಸಬೇಕಾಗಿಲ್ಲ. ಎಲ್ಲವೂ ಸರಿಯಾಗುತ್ತದೆ.

ನಾನು (ವ್ಯಾಕುಲನಾಗಿ): ದಯವಿಟ್ಟು ನೀವು ಆಶೀ ರ್ವದಿಸಿ.

ಮಹಾರಾಜ್ (ಕರುಣಾಪೂರಿತ ಧ್ವನಿಯಲ್ಲಿ): 'ಇದೋ ಆಶೀರ್ವದಿಸಿರುವೆ' ಎಂದು ಹೇಳಿ ಸ್ನಿಗ್ಧವಾದ ತಮ್ಮ ಹಸ್ತದಿಂದ ನನ್ನ ತಲೆಯನ್ನು ನೇವರಿಸಿ ನನ್ನ ಹೃದಯವನ್ನು ತುಂಬಿದರು.

ದೀಕ್ಷೆ ಪಡೆದ ಮತ್ತೊಬ್ಬನ ಸ್ಮರಣೆ :

''ಆಧ್ಯಾತ್ಮಿಕ ಪಥದಲ್ಲಿ ಆಗ ನಾನಿನ್ನೂ ಹೊಸಬ. ಉತ್ಕಟ ವಾದ ಉತ್ಸಾಹ, ಗಭೀರತೆ ಇಲ್ಲ, ಚಂಚಲತೆಯೂ ಬಹಳ. ಪುಸ್ತಕಗಳನ್ನೋದುವುದು ಮತ್ತದನ್ನು ನನಗೆ ಹೋಲಿಸಿಕೊಂಡು ನೋಡುವುದು. ಕೆಲವೊಮ್ಮೆ ಆನಂದವಾದರೆ, ಮತ್ತೆ ಕೆಲವೊಮ್ಮೆ ಭಯವಾಗಿ ಮುದುಡಿಹೋಗುತ್ತಿದ್ದೆ. ಒಮ್ಮೆ ನನಗನ್ನಿಸಿತು, ಆಧ್ಯಾ ತ್ಮಿಕ ಜಗತ್ತಿನಲ್ಲಿ ಪಯಣಿಸಲು ಬೇಕಾದ ಮನೋಬಲ ನನ್ನಲ್ಲಿಲ್ಲ ಎಂದು. ಒಮ್ಮೆ ಮಹಾರಾಜರನ್ನು ಕೇಳಿಯೇಬಿಟ್ಟೆ, ''ಗುರು ಶಿಷ್ಯನ ಮನಸ್ಸನ್ನು ತಿಳಿದುಕೊಳ್ಳಬಲ್ಲರೇನು?'' ಮಹಾರಾಜರು, ''ಖಂಡಿತ, ಗುರು ಎಲ್ಲ ಶಿಷ್ಯರ ಮನೋಭಾವವನ್ನು ತಿಳಿಯ ಬಲ್ಲನು. ಎಲ್ಲ ಶಿಷ್ಯರ ಮೇಲೆ ಅವನಿಗೆ ಸಮಾನ ಸ್ನೇಹವಿರುತ್ತದೆ'' ಎಂದರು. ಅದನ್ನು ಕೇಳಿ, ''ಓ ನನ್ನೆಲ್ಲವನ್ನೂ ತಿಳಿದೇ ನನಗೆ ದೀಕ್ಷೆ ಯಿತ್ತಿದ್ದಾರೆ'' ಎಂದುಕೊಂಡು ನಿಶ್ಚಿಂತನಾದೆ. ಮತ್ತೊಂದು ಪುಸ್ತಕ ವನ್ನೋದಿದೆ. ಅದರಲ್ಲಿ 'ಗುರುಸೇವೆ ಮತ್ತು ಗುರುಸಂಗವನ್ನು ಮಾಡದೆ ಜ್ಞಾನಲಾಭವಾಗುವುದಿಲ್ಲ, ಮುಕ್ತಿಯೂ ದೊರೆಯುವು ದಿಲ್ಲ' ಎಂದಿತ್ತು. ಮನಸ್ಸು ಮತ್ತೆ ಅಧೀರವಾಯಿತು, 'ಹೌದಲ್ಲ, ನಾನಾದರೋ ಗುರುಸೇವೆಯನ್ನು ಕಿಂಚಿತ್ತೂ ಮಾಡಲಿಲ್ಲ. ಗುರು ಸಾನ್ನಿಧ್ಯವಾದರೋ ಎಲ್ಲೋ ಸ್ವಲ್ಪ ಹೊತ್ತು ಮಾತ್ರ. ಹಾಗಾದರೆ ನನ್ನ ಗತಿ ಏನು?' ಎಂದೆನಿಸಿತು. ಮತ್ತೆ ಅವರಿಗೆ ಅದನ್ನು ಬರೆದೆ. ಅಭಯವನ್ನಿತ್ತು ಉತ್ತರಿಸಿದರು, ''ಜಪ-ಧ್ಯಾನವನ್ನು ಹೆಚ್ಚಾಗಿ ಮಾಡಿದರೆ ಗುರುಸೇವೆ, ಗುರುಸಂಗವನ್ನು ಮಾಡಿದಂತೆಯೇ. ಆದ್ದರಿಂದ ನೀನೂ ಹಾಗೆಯೇ ಮಾಡು'' ಎಂದು.

''ಎಷ್ಟೆಷ್ಟೋ ಪ್ರಶ್ನೆಗಳನ್ನಿಟ್ಟುಕೊಂಡು ಅವರಲ್ಲಿಗೆ ಹೋಗುತ್ತಿದ್ದೆ. ಆದರವರ ಶಾಂತಮೂರ್ತಿಯನ್ನು ಕಂಡೊಡನೆಯೇ ನನ್ನ ಸಕಲ ಪ್ರಶ್ನೆಗಳೂ ತಾವೇ ತಾವಾಗಿ ಉಡುಗಿ ಹೋಗುತ್ತಿದ್ದವು. ಸಮಸ್ಯೆಗಳೆಲ್ಲ ಪರಿಹಾರವಾಗಿಬಿಡುತ್ತಿದ್ದವು. ಒಮ್ಮೆ 'ಮನಸ್ಸೇಕೆ ಅಷ್ಟೊಂದು ಕೆಳಗಿಳಿಯುತ್ತದೆ? ಏಕಿಷ್ಟು ಸಂಕೀರ್ಣತೆ? ಮನಸ್ಸಿನೊಡನೆ ಸಂಘರ್ಷವಾದರೂ ಏಕೆ?' ಎಂದು ಬರೆದು ಕೇಳಿದ್ದೆ. ಅದಕ್ಕುತ್ತರವಾಗಿ ಅವರು, ''Life is a struggle. It is a continuous struggle of the higher self to detach itself from the lower self and realise its real blissful identity'' (ಜೀವನವೇ ಒಂದು ಸಂಗ್ರಾಮ; ಕೆಳಗಿನ ಸ್ತರದಿಂದ ಉನ್ನತ ಸ್ತರಕ್ಕೇರಲು ಮತ್ತು ತನ್ನ ನೈಜ ಆನಂದಾವಸ್ಥೆಯನ್ನು ತಿಳಿದುಕೊಳ್ಳಲು ಆತ್ಮವು ನಡೆಸುವ ನಿರಂತರ ಸಂಗ್ರಾಮ ಅದು) ಎಂದರು.

ಮತ್ತೊಬ್ಬ ವಿಧುರ ಶಿಕ್ಷಕರ ಸ್ಮೃತಿ:

''ಅವರನ್ನು ನಾನು ಅದೆಷ್ಟು ಪೀಡಿಸಿರುವೆ! ಅಂತಃಪ್ರಕೃತಿ ಮತ್ತು ಬಾಹ್ಯಪ್ರಕೃತಿಗಳ ದ್ವಂದ್ವವನ್ನು ಚಿತ್ರಿಸಿ ವಾರವಾರಕ್ಕೂ ಪತ್ರ ಬರೆಯುತ್ತಿದ್ದೆ. ತಕ್ಷಣವೇ ಉತ್ತರವನ್ನೂ ಪಡೆಯುತ್ತಿದ್ದೆ. ಅದರಲ್ಲಿ ಅದೆಷ್ಟು ಪ್ರೀತಿ ತುಂಬಿರುತ್ತಿತ್ತು. ಅದೆಷ್ಟು ಆಶೀರ್ವಚನಗಳ ಸುರಿಮಳೆಯಾಗಿರುತ್ತಿತ್ತು! ಒಮ್ಮೊಮ್ಮೆ 'ದೇವರು ನಿನ್ನ ಕೈ ಹಿಡಿದುಕೊಂಡಿದ್ದಾನೆ, ಭಯವೇಕೆ?' ಎಂದು ಆಶ್ವಾಸನೆ ನೀಡುತ್ತಿದ್ದರು. ಮತ್ತೆ ಕೆಲವೊಮ್ಮೆ 'ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ' ಎಂಬ ಗೀತೆಯ ಉಕ್ತಿಯನ್ನು ಉದ್ಧರಿಸಿ ಅಭಯವನ್ನು ನೀಡುತ್ತಿದ್ದರು. ಮತ್ತೊಮ್ಮೆ ಸ್ವಾಮೀಜಿಯವರ ವಾಣಿಯನ್ನು ನೆನಪಿಸುತ್ತಿದ್ದರು, 'ಅವನ ಪೂಜೆಯೇ ಅಪಾರ ಸಂಗ್ರಾಮ, ಸದಾ ಪರಾಜಯವಾದರೂ ಹೆದರಿಸದಿರಲಿ ಅದು ನಿನ್ನನು....'

''೧೯೪೩ರ ದುರ್ಭಿಕ್ಷದ ಸಮಯದಲ್ಲಿ ಹಸಿವಿನಿಂದ ಕಂಗೆಟ್ಟ ಜನರ ಆರ್ತನಾದದಿಂದ ವಿಚಲಿತನಾಗಿ ದೇವರ ಅಸ್ತಿತ್ವ ಮತ್ತು ನ್ಯಾಯಪರತೆಯಲ್ಲಿ ಸಂಶಯವನ್ನು ವ್ಯಕ್ತಪಡಿಸಿ ಅವರಿಗೊಂದು ದೀರ್ಘ ಪತ್ರವನ್ನು ಬರೆದಿದ್ದೆ. ಜವಾಬು ಬಂದಿತು. ಅದರಲ್ಲಿ ಅಸಂತೋಷವೂ ಇರಲಿಲ್ಲ ; ಬೇಸರವೂ ಇರಲಿಲ್ಲ. ಬದಲಿಗೆ ಹಿತವಾದ ಬೈಗುಳದ ಎರಡೇ ಸಾಲುಗಳಿದ್ದವು: 'ನೀನೇನಾದರೂ ಭಗವಂತನ ಅನಂತ ಲೀಲೆಯನ್ನು ಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇ ಆದರೆ ನೀನೇ ಭಗವಂತನಾಗಿಬಿಡುತ್ತಿದ್ದೆ. ಈ ವಿರಾಟ್ ಸೃಷ್ಟಿಯ ಕೇವಲ ಒಂದು ತುಣುಕನ್ನು ನೋಡಿ ಇಡೀ ವಿಶ್ವವನ್ನೇ ವಿಮರ್ಶಿಸುತ್ತಿರುವೆಯೇಕೆ?' ಎಂದಷ್ಟೇ ಬರೆದಿದ್ದರು.

''ಅವರಿಂದ ದೀಕ್ಷೆ ಪಡೆದಿದ್ದ ನನ್ನ ಆತ್ಮೀಯನೊಬ್ಬ ಸಮಾಜವಾದಿ ದಳಕ್ಕೆ ಸೇರಿ ಏನೋ ಒಂದು ರೀತಿ ವರ್ತಿಸುತ್ತಿದ್ದ. ಬೈಬಲಿನಲ್ಲಿ ಬರುವ ಮುಳ್ಳುವನಕ್ಕೆ ಬಿದ್ದ ಬೀಜದಂತೆ ಈತನ ವಿಷಯದಲ್ಲೂ ಜಪದ ಬೀಜವು ನಿಷ್ಫಲವಾಗುತ್ತದೆಂಬ ಆತಂಕವನ್ನು ನಾನು ವ್ಯಕ್ತಪಡಿಸಿದ್ದೆ. ಇದಕ್ಕೆ ಮಹಾರಾಜರು 'ಬಾಲ್ಯದಿಂದಲೇ ತಾಯಿಯನ್ನು ಕಳೆದುಕೊಂಡಿರುವ ಅವನ ನೂರಾರು ತಪ್ಪುಗಳನ್ನು ಕ್ಷಮಿಸಬೇಕು. ಆದರೆ ಬಿತ್ತಿದ ಬೀಜವು ಮುರುಟಿ ಹೋಗುವುದಿಲ್ಲ ; ಅವನ ಆತ್ಮವು ತನ್ನ ಉನ್ನತಿಯ ಪಥವನ್ನು ತಾನಾಗಿ ಕಂಡುಕೊಳ್ಳುತ್ತದೆ' ಎಂದು ಬರೆದಿದ್ದರು.''

ಈ ರೀತಿಯಾದ ಅದೆಷ್ಟು ನೆನಪುಗಳು ಜನರ ಮನದಲ್ಲಿ ಮನೆಮಾಡಿಕೊಂಡಿದೆಯೋ; ಅದೆಷ್ಟು ಮನವನ್ನು ತನ್ನ ಸ್ನಿಗ್ಧ ಬೆಳಕಿನಿಂದ ಬೆಳಗಿದೆಯೋ ಬಲ್ಲವರಾರು? ಆ ಬೆಳಕು ಮರ್ತ್ಯಲೋಕದ ಬೆಳಕಲ್ಲ , ಮರ್ತ್ಯಜೀವಿಯ ಮೂಲಕ ಹರಿದ ಭಗವಂತನ ನಿರಂತರ ಕರುಣೆಯ ಬೆಳಕು. ಏಕೆಂದರೆ ಭಗವಂತನೊಬ್ಬನೇ ಏಕೈಕ ಲೋಕಗುರು.

ಈಚೆಗೆ ವಿರಜಾನಂದರ ಶರೀರವು ಸ್ವಸ್ಥಗೊಳ್ಳುತ್ತಿದ್ದು, ಇದು ಎಲ್ಲರಿಗೂ ಆನಂದದಾಯಕ ವಿಷಯವಾಗಿತ್ತು. ದಿನವೂ ಸಂಜೆ ಸ್ವಲ್ಪ ಸುತ್ತಾಡಿ ಬರುತ್ತಿದ್ದರು; ಮೆಟ್ಟಿಲನ್ನು ಹತ್ತಿ ಇಳಿಯಲು ಮಾತ್ರ ಗಾಲಿಕುರ್ಚಿಯನ್ನು ಉಪಯೋಗಿಸುತ್ತಿದ್ದರು. ಒಂದು ದಿನ (ಜನವರಿ ೧೫) ಕೊಲ್ಕತ್ತೆಯ ಕಾಲಿಕಾ ಥಿಯೇಟರಿನಲ್ಲಿ 'ರಾಮ್‌ಪ್ರಸಾದ್' ಎಂಬ ನಾಟಕವನ್ನು ನೋಡಲು 'ವಿಶೇಷ ಆಹ್ವಾನಿತ'ರಾಗಿ ಹೋಗಿದ್ದರು. ಮತ್ತೊಂದು ದಿನ (ಮಾರ್ಚ್ ೧) ಕೊಲ್ಕತ್ತೆಯ ಈಡನ್ ಗಾರ್ಡನ್ಸ್‌ನಲ್ಲಿ ನಡೆಯುತ್ತಿದ್ದ 'ಸರ್ವಭಾರತೀಯ ಪ್ರದರ್ಶನ'ವನ್ನು ನೋಡಿ ಬಂದರು. ಇದಕ್ಕಾಗಿ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು.

ಜ್ಯೋತಿಷಿಗಳೊಬ್ಬರು ಜಾತಕವನ್ನು ಪರಿಶೀಲಿಸಿ, ವಿರಜಾನಂದರಿಗೆ ಜುಲೈ ತಿಂಗಳಿನಲ್ಲಿ (೧೯೪೮) ಪ್ರಬಲವಾದ ಕಂಟಕವಿದೆಯೆಂದು ನುಡಿದಿದ್ದರು. ಕೇಳಿ ವಿರಜಾನಂದರು ನಕ್ಕುಬಿಟ್ಟರು. ಎಲ್ಲ ವಿಷಯಗಳಲ್ಲಿಯೂ ಭಗವಂತನನ್ನೇ ಆಶ್ರಯಿಸಿದರೆ ಮನುಷ್ಯನು ಶಾಂತಿ–ಸಮಾಧಾನಗಳಿಂದ ಇರಬಲ್ಲನಷ್ಟೆ!

ಜನವರಿ ೩೦ರಂದು ವಿರಜಾನಂದರು ತಮ್ಮ ಸಂಜೆಯ ಸುತ್ತಾಟವನ್ನು ಮುಗಿಸಿ, ರಾಮಕೃಷ್ಣ ಮಂದಿರಕ್ಕೆ ಹೋಗಿ ನಮಸ್ಕರಿಸಿ ತಮ್ಮ ಕೊಠಡಿಗೆ ಹಿಂತಿರುಗುತ್ತಿರುವಾಗ ಸಂನ್ಯಾಸಿಗಳೊಬ್ಬರು ಓಡಿ ಬಂದು, ರೇಡಿಯೋದಲ್ಲಿ ಕೇಳಿದ ದಾರುಣ ವಾರ್ತೆಯನ್ನು ತಿಳಿಸಿದರು. ''ಮಹಾತ್ಮಾ ಗಾಂಧೀಜಿಯವರು ಸಂಜೆ ೫ ಗಂಟೆ ಹೊತ್ತಿಗೆ ಹಿಂದೂ ಆತತಾಯಿಯೊಬ್ಬನಿಂದ ಹತರಾದರು'' ಎಂದು. ಇಡೀ ಭಾರತದಲ್ಲೇ ತೀವ್ರ ಶೋಕವು ಹರಡಿದಂತೆಯೇ ಈ ಸಂನ್ಯಾಸಿಗಳ ಮಠದಲ್ಲಿಯೂ ಸಹ ದುಃಖದ ಮೋಡವು ಮುಸುಕಿತು. ಎರಡು ದಿನಗಳ ನಂತರವೇ ಫೆಬ್ರವರಿ ೧ರಂದು ಸ್ವಾಮಿ ವಿವೇಕಾನಂದರ ಜನ್ಮತಿಥಿ. ಪೂಜೆ ಹೋಮಗಳಂತಹ ಅವಶ್ಯವಾದ ಪೂಜಾಕರ್ಮಗಳನ್ನು ಬಿಟ್ಟು ಬೇಲೂರು ಮಠದಲ್ಲಿ ಇನ್ನಾವುದೇ ಸಮಾರಂಭವಿರುವುದಿಲ್ಲವೆಂಬ ಸಮಾಚಾರವನ್ನು ಆಕಾಶವಾಣಿ ಮೂಲಕ ಘೋಷಿಸಲಾಗಿತ್ತು. ಆದರೂ

ಸಹ ಹತ್ತು ಸಾವಿರ ಭಕ್ತರು ಮಠದಲ್ಲಿ ನೆರೆದಿದ್ದರು. ಗಾಂಧೀಜಿಯವರ ಅಂತಿಮ ಪ್ರಯಾಣದ ೧೩ನೇ ದಿನವಾದ ಫೆಬ್ರವರಿ ೧೧ರಂದು ಮಠದಲ್ಲಿ ಶ್ರೀರಾಮಕೃಷ್ಣರ ಷೋಡಶೋಪಚಾರ ಪೂಜೆಯನ್ನು ಮಾಡಿ ಹೋಮ ಮಾಡಲಾಗಿತ್ತು; ಸಂಜೆ ರಾಮನಾಮ ಸಂಕೀರ್ತನೆಯನ್ನು ಇಟ್ಟುಕೊಳ್ಳಲಾಗಿತ್ತು.

ವಿಶಾಖಪಟ್ಟಣದ ಆಶ್ರಮಾಧ್ಯಕ್ಷರಾದ ಸ್ವಾಮಿ ನಿಃಶ್ರೇಯಸಾನಂದರು ಮಾರಿಷಸ್ ದ್ವೀಪದಲ್ಲಿನ ಆಶ್ರಮದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಫೆಬ್ರವರಿ ೩ರಂದು ಬೇಲೂರು ಮಠದಿಂದ ಹೊರಟರು. ೧೯೪೬ ಮತ್ತು ೧೯೪೭ರಲ್ಲಿ ಬೇಸಿಗೆಯಲ್ಲಿ ಮಹಾರಾಜರು ವಾಲ್ಟೇರಿನಲ್ಲಿ ತಂಗಿದ್ದಾಗ ನಿಃಶ್ರೇಯಸಾನಂದರು ಸರ್ವ ಪ್ರಯತ್ನಗಳಿಂದಲೂ ಅವರ ಸೇವೆ, ಶುಶ್ರೂಷೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಹಾರಾಜರು ಅವರನ್ನು ಬೀಳ್ಕೊಡುವಾಗ ಹೊಸ ಗೈರಿಕವಸ್ತ್ರವನ್ನಿತ್ತು ಮನದುಂಬಿ ಆಶೀರ್ವದಿಸಿದರು. ವಿರಜಾನಂದರ ಪಿತೃವಾತ್ಸಲ್ಯದ ಸ್ಪರ್ಶವನ್ನು ವಿಪುಲವಾಗಿ ಪಡೆದಿದ್ದ ನಿಃಶ್ರೇಯಸಾನಂದರ ಕಣ್ಣುಗಳು ತುಂಬಿ ಬಂದವು. ಮತ್ತೆ ಮಹಾರಾಜರ ದರ್ಶನವಾಗುವುದೋ ಇಲ್ಲವೋ ಎಂದು ಹೃದಯದಲ್ಲಿ ವೇದನೆಯನ್ನು ಅನುಭವಿಸಿದರು. ಈ ವೇದನೆಯಲ್ಲಿ ಮೋಹವಿಲ್ಲ. ಪ್ರೀತಿಯಿಂದಲೇ ಬಂಧನ, ಪ್ರೀತಿಯಿಂದಲೇ ಮುಕ್ತಿಯೂ ಸಹ. ಈ ಪ್ರೀತಿಯು ಮುಕ್ತಿಯ ಬೆಳಕಿನಿಂದ ಉಜ್ವಲವಾದದ್ದು. ಇದರಲ್ಲಿ ಕಿಂಚಿತ್ತೂ ಲೌಕಿಕತೆ ಎಂಬುದು ಇರುವುದಿಲ್ಲ.

ಸ್ವಾಮಿ ನಿಃಶ್ರೇಯಸಾನಂದರು ಮಾರಿಷಸ್‌ಗೆ ಹೊರಟ ಕೆಲವು ದಿನಗಳ ನಂತರ (ಫೆ. ೨೧, ೧೯೪೮) ಸ್ವಾಮಿ ಶಾಂತರೂಪಾನಂದರು ಸ್ಯಾನ್‌ಫ್ರಾನ್ಸಿಸ್ಕೋದ ವೇದಾಂತ ಕೇಂದ್ರಕ್ಕೆ ಸೇವೆ ಸಲ್ಲಿಸಲು ಅಮೇರಿಕೆಗೆ ಹೊರಟರು. ಅವರನ್ನು ಬೀಳ್ಕೊಡುವಾಗ ವಿರಜಾನಂದರು ಅವರಿಗೆ ಉತ್ಸಾಹ ತುಂಬಿ, ಆಶೀರ್ವದಿಸಿದರು. ಅಂದಿನ ದಿನವೇ ಬೆಳಗ್ಗೆ ವಿರಜಾನಂದರು ಕೆಲವು ಸಾಧು, ಭಕ್ತರೊಡಗೂಡಿ ದಕ್ಷಿಣೇಶ್ವರ ಮತ್ತು ಕಾಶೀಪುರದ ತೋಟದ ಮನೆಯನ್ನು ನೋಡಿಕೊಂಡು ಬಂದರು. ಹಿಂದಿರುಗುವಾಗ ಮಹಿಮ ಬಾಬುಗಳನ್ನೂ ಸಹ ಭೇಟಿಯಾದರು. ಅವರಿಗಾಗಿ ಒಂದು ಬುಟ್ಟಿ ಹಣ್ಣು, ಸಿಹಿತಿಂಡಿಗಳನ್ನು ತೆಗೆದುಕೊಂಡು ಹೋಗಿದ್ದರು. ಇಷ್ಟರಲ್ಲೇ ಸ್ವಾಮಿ ವಿಜಯಾನಂದರು (ಪಶುಪತಿ ಮಹಾರಾಜ್) ದಕ್ಷಿಣ ಅಮೇರಿಕಾದ ಅರ್ಜೆಂಟೀನಾದಿಂದ ಬೇಲೂರು ಮಠಕ್ಕೆ ಬಂದಿದ್ದರು. ಸುಮಾರು ಹತ್ತು ವರ್ಷಗಳ ನಂತರ ಅವರನ್ನು ಕಂಡು ಮಠದಲ್ಲಿ ಎಲ್ಲರಿಗೂ ತುಂಬ ಸಂತೋಷವಾಯಿತು. ಅವರು ದಕ್ಷಿಣ ಅಮೇರಿಕಾದ ಧರ್ಮಾಂಧ ರೋಮನ್ ಕ್ಯಾಥೋಲಿಕರ ನಡುವೆ ವೇದಾಂತ ಪ್ರಚಾರದ ತಮ್ಮ ನಾನಾ ಅನುಭವಗಳನ್ನು ತಿಳಿಸಿದರು. ಅವರು ಸುಮಾರು ನಾಲ್ಕು ತಿಂಗಳು ಭಾರತದಲ್ಲಿಯೇ ಇದ್ದರು. ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ವಿರಜಾನಂದರು ಅರ್ಜೆಂಟೀನಾದ ವೇದಾಂತ-ಅನುರಾಗಿ ಬಂಧುಗಳಿಗೆ ಆಶೀರ್ವಾಣಿಯನ್ನು ಬರೆದು ವಿಜಯಾನಂದರಿಗೆ ಇತ್ತರು.

## ೨೩

### ಮೂರು ವರ್ಷಗಳ ನಂತರ ಹಿಮಾಲಯದಲ್ಲಿ ಮತ್ತೆ!

**ಸೆಪ್ಟೆಂಬರ್ ೧೮, ೧೯೪೮.** ವಿರಜಾನಂದರು ಶ್ಯಾಮಲಾತಾಲ್‌ಗೆ ಹಿಂದಿರುಗಿದ್ದಾರೆ. ವೈದ್ಯರು ಕಳುಹಿಸಲು ಹಿಂಜರಿದರೂ, ಜ್ಯೋತಿಷಿಗಳು ಕಂಟಕಗಳನ್ನು ತೋರಿ ಆತಂಕಪಟ್ಟರೂ, ಕೇವಲ ಜಿಜ್ಞಾಸೆಗಳಿಂದ ಒಬ್ಬರ ಭಾಗ್ಯವನ್ನು ನಿಯಂತ್ರಿಸಬಹುದೇನು? ಜೀವನದ ಸಂಧ್ಯೆಯಲ್ಲಿ ಮಾನವರು ಗಣಿತ-ಗುಣಿತಗಳ ಮೇಲೆ ದೃಷ್ಟಿ ಹರಿಸಿ ಆಗಬೇಕದ್ದಾದರೂ ಏನು? ಹೀಗೆ ಭಾವಿಸಿ ಮಹಾರಾಜರು ಹೊರಟು ಬಂದಿದ್ದಾರೆ. ಹಾದಿಯಲ್ಲಿ ಸ್ವಲ್ಪವೂ ಕಷ್ಟವಾಗಲಿಲ್ಲ. ಬಂದ ದಿನ ನೆಮ್ಮದಿಯಿಂದ ಬಹಳ ಚೆನ್ನಾಗಿ ನಿದ್ರಿಸಿದರು. ತಮ್ಮ ಅಂದಿನ ದಿನಚರಿಯಲ್ಲಿ 'ಜೈ ಗುರು ಮಹಾರಾಜ್ ಕೀ ಜೈ' ಎಂದು ಬರೆದಿಟ್ಟರು.

ಗಾಜಿನಿಂದ ಆವೃತವಾದ ವರಾಂಡಾದಲ್ಲಿಯೇ ಮಹಾರಾಜರ ಇಡೀ ದಿನ ಕಳೆಯುತ್ತಿತ್ತು. ಚಳಿಗಾಲದ ಬಿಸಿಲು ಪರ್ವತಗಳ ಮೇಲೆ ಬಿದ್ದು ಹೊಳೆಯುತ್ತಿತ್ತು. ಬಣ್ಣ ಬಣ್ಣದ ಪಕ್ಷಿಗಳು ಕಲರವ ಮಾಡುತ್ತಿದ್ದವು. ದೇವದಾರು, ಪೈನಿನ ಮರಗಳ ಕೊಂಬೆಗಳು ಗಾಳಿಗೆ ಅಲುಗಿ ಉಂಟು ಮಾಡುತ್ತಿದ್ದ ಸ್ನಿಗ್ಧವಾದ ಸುಂಯ್ ಸುಂಯ್ ಶಬ್ದವು ನಾಟಕರಂಗದ ಹಿನ್ನಲೆ ಸಂಗೀತದ ಮೃದು ಗುಂಜರದಂತೆ ಕಿವಿಗೆ ತಂಪೆರೆಯುತ್ತಿದ್ದವು. ಆ ವರಾಂಡಾದ ಎರಡು ತುದಿಗೂ ಎರಡು ಗಿಡ್ಡ ಬೆಂಚುಗಳನ್ನು ಹಾಕಲಾಗಿದೆ. ಇವು ಇಲ್ಲಿಯ ಪಹಾಡಿ ಕೆಲಸಗಾರರೇ ಮಾಡಿರುವಂತಹುದು. ಬಹಳ ದಿನಗಳ ನಂತರ 'ಬಡೋ ಮಹಾರಾಜ್' ಬಂದಿದ್ದಾರೆ. ಅವರ ದರ್ಶನ ಮಾಡಲು ಗ್ರಾಮವಾಸಿಗಳು ಬರುತ್ತಾರೆ. ಪ್ರಣಾಮದ ನಂತರ ಆ ಬೆಂಚುಗಳಲ್ಲಿ ಕುಳಿತುಕೊಂಡು ಈ ವೃದ್ಧ ಸಂನ್ಯಾಸಿ-ತಂದೆಯೊಡನೆ ತಮ್ಮ ಸುಖ ದುಃಖಗಳನ್ನು ಹೇಳಿಕೊಳ್ಳುತ್ತಾರೆ. ಅವರಾರೂ ಖಾಲಿ ಕೈಯಲ್ಲಿ ಬರುವುದಿಲ್ಲ. ಕೆಲವರು ಚಿಕ್ಕ ಲೋಟವೊಂದರಲ್ಲಿ ಒಂದು ಪಾವು ಹಾಲನ್ನು ತೆಗೆದುಕೊಂಡು ಬರುತ್ತಾರೆ. ಮತ್ತೆ ಕೆಲವರು ತಮ್ಮ ತೋಟದಲ್ಲಿ ಬೆಳೆದ ಸೌತೆಕಾಯಿ ಒಂದನ್ನು ಕೈಯಲ್ಲಿ ಹಿಡಿದುಕೊಂಡು ಬರುತ್ತಾರೆ. ಅವರುಗಳ ಭಾವನೆಯೇನೆಂದರೆ 'ದಿಗ್ದಿಗಂತಗಳಲ್ಲಿಯೂ ಪೂಜಾರ್ಹನಾದ ಧರ್ಮಗುರು ನೀನೆಂಬುದು ನಮಗೆ ಗೊತ್ತು. ನೂರಾರು ಶಿಷ್ಯರು ನಿನಗೆ. ನಿನಗೆ ಸಲ್ಲುವ ಗೌರವವಾದರೂ ಅದೆಷ್ಟು! ಆದರೆ ನಮಗೆ ನೀನು ಅದೇ ಹಿಂದಿನ ಬಡೋ ಮಹಾರಾಜ್, ಬಡಜೀವಿಗಳಾದ ನಮಗೆ ನೀನೇ ವಿಶ್ವಾಸಪಾತ್ರನಾದ ಸ್ನೇಹಿತ. ನಮ್ಮೆಲ್ಲರ ಮಹತ್ತಾದ ಅವಲಂಬನೆ. ನಿನ್ನ ಮಹಿಮೆ ನಿನಗೇ ಇರಲಿ. ನೀನು ನಮ್ಮ ಬಳಿಗೆ ಅದೇ ಹಿಂದಿನ ಸ್ನೇಹಿತನಂತೆ ಬಾ, ಇರು, ನಮ್ಮನ್ನು ಪ್ರೀತಿಸು' ಎಂಬುದು.

*(ಮುಂದುವರಿಯುವುದು)*